ಯಾರು? ಹಾಗೂ ಆ ಸಂಸ್ಥೆಯ ಹೆಸರೇನು?

ಆ) ಸದರಿ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಕಪ್ಪು ಪಟ್ಟಿಗೆ ಸೇರಿಸಲು ಕಾರಣಗಳೇನು? ಈಗ ಬೆಂಗಳೂರಿನಲ್ಲಿನ ಮಹಾನಗರ ಪಾಲಿಕೆಯ ಯಾವ ಯಾವ ಕಾಮಗಾರಿಗಳನ್ನು ಇವರಿಗೆ ವಹಿಸಲಾಗಿದೆ? ವಿವರ ನೀಡುವುದು.

ಈ) ಸದರಿ ಸಂಸ್ಥೆಯವರಿಗೆ ನೀಡಲಾದ ಬೆಂಗಳೂರು ಮಹಾನಗರ ಪಾಲಿಕೆಯ ಕಾಮಗಾರಿಗಳು ಯಾವುವು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ) ಬೆಂಗಳೂರಿನ ಕೆ.ಆರ್.ಮಾರುಕಟ್ಟೆಯ ಹೊಸ ಕಟ್ಟಡದ ಗುತ್ತಿಗೆದಾರರು ಮೆ: ಶ್ಯಾಮರಾಜು ಮತ್ತು ಕಂಪೆನಿ.

ಆ) ಇಲ್ಲ.

ಇ ಮತ್ತು ಈ) ಅನ್ವಯಿಸುವುದಿಲ್ಲ. ಬೆಂಗಳೂರು ಮಹಾನಗರ ಪಾಲಿಕೆಯ ಸದರಿ ಗುತ್ತಿಗೆದಾರರಿಗೆ ಈ ಕೆಳಕಂಡ 2 ಕಾಮಗಾರಿಗಳನ್ನು ವಹಿಸಿದೆ:

1) ಮೇಖ್ರಿ ವೃತ್ತದಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ.

2) ಅಕ್ಕಿತಿಮ್ಮನಹಳ್ಳಿಯಲ್ಲಿ ಜಂಟಿ ಯೋಜನೆಯಡಿಯಲ್ಲಿ ವಾಣಿಜ್ಯ ಸಂಕೀರ್ಣದ ನಿರ್ಮಾಣ.

ಬಿ.ಡಿ.ಎ ನಿವೇಶನಗಳ ಹಂಚಿಕೆ.

186 (289)

ಶ್ರೀ ಪಿ.ಸಿ.ಮೋಹನ್ (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನ ಹಂಚಿಕೆದಾರರು 10 ವರ್ಷಗಳೊಳಗೆ ತಮ್ಮ ನಿವೇಶನದಲ್ಲಿ ಮನೆ ನಿರ್ಮಾಣ ಮಾಡದ ಪ್ರಯುಕ್ತ ಪ್ರಾಧಿಕಾರವು ವಿಧಿಸುತ್ತಿರುವ ದುಬಾರಿಯಾದ ಶುಲ್ಕವನ್ನು ಸಂದಾಯ ಮಾಡುವ ಸಂಕಟ ಪರಿಸ್ಥಿತಿಯಲ್ಲಿದ್ದಾರೆ ಎಂಬುದು ಸರ್ಕಾರದ

ಗಮನಕ್ಕೆ ಬಂದಿದೆಯೇ?

ಅ) ಅನೇಕ ಬಿಡಿಎ ಬಡಾವಣೆಗಳಲ್ಲಿ ಬಹಳ ಹಿಂದೆಯೇ ಹಂಚಿಕೆ ಮಾಡಲಾಗಿದ್ದರೂ ಅಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಒಳಚರಂಡಿ ಮತ್ತು ವಿದ್ಯುಚ್ಛಕ್ತಿ ಇವುಗಳನ್ನು ಒದಗಿಸಲು ಪ್ರಾಧಿಕಾರವು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಹಂಚಿಕೆದಾರರನ್ನು ದಂಡನೆಗೆ ಗುರಿ ಮಾಡುವುದು ಸಮಂಜಸವೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಇಲ್ಲ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು 1984ರ ನಿಯಮ 13 ಉಪನಿಯಮ (6)ರ ಪ್ರಕಾರ ಗುತ್ತಿಗೆ ಕರಾರು ಪತ್ರ ನೋಂದಾಯಿಸಿದ ದಿನಾಂಕದಿಂದ ಮೂರು ವರ್ಷಗಳೊಳಗೆ ಮನೆ ನಿರ್ಮಾಣ ಮಾಡದ ಪಕ್ಷದಲ್ಲಿ ಬಿ.ಡಿ.ಎ ನಿವೇಶನದಾರರು ದಂಡ ಶುಲ್ಕ ಸಂದಾಯ ಮಾಡುವ ಷರತ್ತಿಗೊಳಪಟ್ಟಿರುತ್ತದೆ. ಗುತ್ತಿಗೆದಾರರು ಕಟ್ಟಡವನ್ನು ನಿರ್ಮಾಣ ಮಾಡದಿದ್ದಲ್ಲಿ ಈ ದಂಡ ಶುಲ್ಕವು 4ನೇ ವರ್ಷದಿಂದ ಪ್ರಾರಂಭವಾಗಿ ಮುಂದುವರಿಯುತ್ತಾ ಗುತ್ತಿಗೆ ಅವಧಿಯ ಅಂತ್ಯಕ್ಕೆ ಕೊನೆಗಳೊಳ್ಳುತ್ತದೆ.

ಆ ಮತ್ತು ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ನೀರು, ಒಳಚರಂಡಿ ಮತ್ತು ವಿದ್ಯುಚ್ಛಕ್ತಿ ಇವುಗಳನ್ನು ಒದಗಿಸಲು ಕ್ರಮವನ್ನು ಕೈಗೊಳ್ಳುತ್ತಿದೆ. ಬಿಡಿಎ ಬಡಾವಣೆಗಳಲ್ಲಿ ಅನೇಕ ನಿವೇಶನಗಳು ಖಾಲಿ ಇದ್ದು, ಇದರಿಂದಾಗಿ ಅಕ್ಕ ಪಕ್ಕದವರಿಗೆ ಅನಾನುಕೂಲ ಉಂಟಾಗುತ್ತಿದ್ದು ಇತರೆ ಹಂಚಿಕೆದಾರರು ಮನೆ ನಿರ್ಮಾಣ ಮಾಡಿ ವಾಸಿಸುತ್ತಿದ್ದು ಅವರುಗಳು ಬಹಳವಾಗಿ ಪ್ರತಿಭಟಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ಕಾಲಾವಧಿ ವಿಸ್ತರಣೆ ನೀಡಲು ದಂಡವನ್ನು ವಿಧಿಸಲಾಗುತ್ತಿದೆ. ಗುತ್ತಿಗೆ ಅವಧಿ ಮುಗಿದರೂ ಸಹಾ ಅನೇಕ ಹಂಚಿಕೆದಾರರು ಮನೆ ನಿರ್ಮಾಣ ಮಾಡದೇ ಲಾಭವನ್ನು ಗಳಿಸುವ ಉದ್ದೇಶದಿಂದ ಗುತ್ತಿಗೆ ಅವಧಿ ಮುಗಿದ ನಂತರ ಮಾರಾಟ ಮಾಡುತ್ತಿದ್ದಾರೆ. ಖಾಲಿ ನಿವೇಶನ ದಂಡ ಶುಲ್ಕ ಇಂತಹ ಕ್ರಮಕ್ಕೆ ತಡೆಯೊಡ್ಡುವ ಉದ್ದೇಶವಾಗಿರುತ್ತದೆ.

ಬೀರೂರು ಕ್ಷೇತ್ರದ ನಾಗೇನಹಳ್ಳಿ ಬಳಿ ಇರುವ ವಿದ್ಯುತ್ ಎಂ.ಯು.ಎಸ್.ಎಸ್. ಪ್ರಾರಂಭಿಸುವುದು.